# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1765 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14.03.2022 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಂಗಳೂರು ನಗರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಇರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?</td><td>ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ಜಿಲ್ಲೆ</th><th>ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ</th></tr>
<tr><td>ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆ</td><td>16</td></tr>
<tr><td>ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆ</td><td>20</td></tr>
<tr><td>ಬೆಂಗಳೂರು ಗ್ರಾಮಾಂತರ ಶೈಕ್ಷಣಿಕ ಜಿಲ್ಲೆ</td><td>16</td></tr>
</table></td></tr>
<tr><td>ಆ.</td><td>ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿವೆಯೇ;</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ 16 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸ್ವಂತ ಕಟ್ಟಡ ಹೊಂದಿರುತ್ತವೆ.<br><br>ಬೆಂಗಳೂರು ದಕ್ಷಿಣ ಜಿಲ್ಲೆಯ 19 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸ್ವಂತ ಕಟ್ಟಡ ಹೊಂದಿರುತ್ತವೆ.<br><br>ಬೆಂಗಳೂರು ಉತ್ತರ ಜಿಲ್ಲೆಯ 12 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸ್ವಂತ ಕಟ್ಟಡ ಹೊಂದಿರುತ್ತವೆ.</td></tr>
<tr><td>ಇ.</td><td>ಇಲ್ಲದಿದ್ದಲ್ಲಿ, ಎಷ್ಟು ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿಲ್ಲ; ಯಾವ ಯಾವ ಕಾರಣದಿಂದಾಗಿ ಸ್ವಂತ ಕಟ್ಟಡ ನಿರ್ಮಿಸಿರುವುದಿಲ್ಲ;(ವಿವರ</td><td>ಬೆಂಗಳೂರು ದಕ್ಷಿಣ ಜಿಲ್ಲೆಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಮಮೂರ್ತಿ ನಗರ ಈ ಕಾಲೇಜು 2018-19ನೇ ಸಾಲಿನಲ್ಲಿ ಸ್ಥಳಾಂತರಗೊಂಡಿರುವ ಕಾಲೇಜಾಗಿದ್ದು, ಪ್ರಸ್ತುತ ಲಭ್ಯವಿರುವ ಸರ್ಕಾರಿ ಪ್ರೌಢಶಾಲಾ ವಿಭಾಗದಲ್ಲಿರುವ ಹೆಚ್ಚುವರಿ ಕೊಠಡಿಗಳನ್ನು ಬಳಸಿಕೊಳ್ಳಲಾಗುತ್ತಿದೆ.</td></tr>
</table>

<table>
<tr>
<td></td>
<td>ನೀಡುವುದು)</td>
<td>ಬೆಂಗಳೂರು ಉತ್ತರ ಜಿಲ್ಲೆಯ ಸ್ವಂತ ಕಟ್ಟಡ ಹೊಂದಿಲ್ಲದ 04 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವರ ಕೆಳಕಂಡಂತಿದೆ. ಸದರಿ ಕಾಲೇಜುಗಳು ಪ್ರಸ್ತುತ ಲಭ್ಯವಿರುವ ಸರ್ಕಾರಿ ಪ್ರೌಢಶಾಲಾ ವಿಭಾಗದಲ್ಲಿರುವ ಹೆಚ್ಚುವರಿ ಕೊಠಡಿ ಬಳಸಿಕೊಂಡು ಕಾರ್ಯನಿರ್ವಹಿಸುತ್ತಿವೆ.
<table>
<tr><th>ಕ್ರಸಂ</th><th>ಸರ್ಕಾರಿ ಪದವಿ ಪೂರ್ವ ಕಾಲೇಜು ವಿಳಾಸ</th><th>ಷರಾ</th></tr>
<tr><td>1</td><td>ಜೆ.ಸಿ ನಗರ</td><td>ನಿವೇಶನ ಸಮಸ್ಯೆ, ಕಟ್ಟಡ ಹಾಗೂ ಜಾಗ ಕೇಂದ್ರ ರಕ್ಷಣಾ ಇಲಾಖೆಯ ಅಧೀನಕ್ಕೆ ಒಳಪಟ್ಟಿರುತ್ತದೆ.</td></tr>
<tr><td>2</td><td>ಹೆಬ್ಬಾಳ</td><td>2018-19ನೇ ಪ್ರಾರಂಭವಾಗಿರುವ ಕಾಲೇಜು. ಪ್ರಸ್ತುತ ಸರ್ಕಾರಿ ಪ್ರಾಥಮಿಕ ಶಾಲೆಯ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.</td></tr>
<tr><td>3</td><td>ರಾಜನಕುಂಟೆ</td><td>2020-21ನೇ ಸಾಲಿನಲ್ಲಿ ಪ್ರಾರಂಭವಾಗಿರುವ ಕಾಲೇಜು</td></tr>
<tr><td>4</td><td>ಮಾಕಳಿ</td><td>2021-22ನೇ ಸಾಲಿನಲ್ಲಿ ಪ್ರಾರಂಭವಾಗಿರುವ ಕಾಲೇಜು</td></tr>
</table>
</td>
</tr>
<tr>
<td>ಈ.</td>
<td>ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಅಗತ್ಯವಿರುವ ಅನುದಾನವೆಷ್ಟು;</td>
<td rowspan="2">ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆ ಆಧರಿಸಿ ಸಂಬಂಧಿಸಿದ ಅಭಿಯಂತರರಿಂದ ಅಂದಾಜು ಪಟ್ಟಿ ಸಿದ್ದಪಡಿಸಿ ಹಂತಹಂತವಾಗಿ ರಾಜ್ಯದಾದ್ಯಂತ ಕಾಲೇಜು ಕಟ್ಟಡ ನಿರ್ಮಾಣ ಕಾರ್ಯಕೈಗೊಳ್ಳಲು ಕ್ರಮವಹಿಸಲಾಗುತ್ತದೆ.</td>
</tr>
<tr>
<td>ಉ.</td>
<td>ಎಷ್ಟು ವರ್ಷಗಳ ಒಳಗೆ ಕಟ್ಟಡಗಳನ್ನು ನಿರ್ಮಿಸಲಾಗುವುದು; (ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ವಿವರ ನೀಡುವುದು)</td>
</tr>
</table>

**ಇಪಿ: 99 ಯೋಸಕ 2022**

(ಬಿ.ಸಿ.ನಾಗೇಶ್)

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**